## ನಿಮ್ಮೊಡನೆ

# ಆನ್‌ಲೈನ್ ಗೇಮ್ ಉಪಟಳ: ಬಂದಿದೆ ಎಚ್ಚೆತ್ತುಕೊಳ್ಳಲೇಬೇಕಾದ ತುರ್ತು ಸಂದರ್ಭ

**‘ಪಬ್‌ಜಿ ಆಡಬೇಡ’ ಎಂದಿದ್ದಕ್ಕೆ ಪಿಸ್ತೂಲಿನಿಂದ ಗುಂಡು ಹಾರಿಸಿ ತಾಯಿಯನ್ನು ಮಗನೇ ಕೊಂದಿದ್ದಾನೆ. ಮೃತದೇಹವನ್ನು ಮೂರು ದಿನಗಳ ಕಾಲ ಕೋಣೆಯಲ್ಲಿ ಬಚ್ಚಿಟ್ಟಿದ್ದಾನೆ. ತನ್ನ ತಂಗಿಯನ್ನೂ ಅದೇ ಕೋಣೆಯಲ್ಲಿ ಕೂಡಿಹಾಕಿದ್ದಾನೆ! ಒಬ್ಬ ಬಾಲಕ ಇಷ್ಟು ಕ್ರೂರವಾಗಿ ನಡೆದುಕೊಳ್ಳಲು ಸಾಧ್ಯವಾಗಿದ್ದು ಹೇಗೆ?**

ಆನ್‌ಲೈನ್ ಗೇಮ್ ಆಡಬೇಡ ಎಂದು ಬುದ್ಧಿಮಾತು ಹೇಳಿದ್ದೇ ಮಹಾ ಅಪರಾಧವಾಗಿ, ಅಷ್ಟುಮಾತ್ರಕ್ಕೆ ಹೆತ್ತ ತಾಯಿಯನ್ನೇ ಕೊಲ್ಲುವಂತಹ ಕ್ರೌರ್ಯ ಮಕ್ಕಳ ಮಿದುಳಿಗೆ ಹೊಕ್ಕುವುದಾದರೂ ಹೇಗೆ? 16ರ ಪೋರ, ತಾಯಿಗೇ ಗುಂಡಿಟ್ಟು ಕೊಲ್ಲುತ್ತಾನೆ ಎಂದರೆ ಆನ್‌ಲೈನ್ ಗೇಮ್ ಎಂಬ ಈ ಅಂಟುಚಟವು ಮಕ್ಕಳ ಮನಸ್ಸನ್ನು ಹೇಗೆಲ್ಲಾ ಆವರಿಸಿರಬಹುದು?

ಪೋಷಕರ ನಿದ್ದೆಗೆಡಿಸುವಂತಹ ಇಂತಹದೊಂದು ಕೃತ್ಯ ಉತ್ತರಪ್ರದೇಶದ ರಾಜಧಾನಿ ಲಖನೌದಿಂದ ಈಚೆಗೆ ವರದಿಯಾಗಿದೆ! ‘ಪಬ್‌ಜಿ ಆಡಬೇಡ’ ಎಂದು ಗದರಿದ್ದಕ್ಕೆ ಪಿಸ್ತೂಲಿನಿಂದ ಗುಂಡು ಹಾರಿಸಿ ತಾಯಿಯನ್ನು ಮಗನೇ ಕೊಂದಿದ್ದಾನೆ. ಅಷ್ಟೇ ಅಲ್ಲ, ತಾಯಿಯ ಮೃತದೇಹವನ್ನು ಮೂರು ದಿನಗಳ ಕಾಲ ಕೋಣೆಯಲ್ಲಿ ಬಚ್ಚಿಟ್ಟಿದ್ದಾನೆ ಮತ್ತು ಮನೆಯಲ್ಲಿದ್ದ ಒಬ್ಬಳೇ ತಂಗಿಯನ್ನು ಅದೇ ಕೋಣೆಯಲ್ಲಿ ಕೂಡಿಹಾಕಿದ್ದಾನೆ! ತಾಯಿ ಮತ್ತು ತಂಗಿಯ ವಿಚಾರದಲ್ಲಿ ಒಬ್ಬ ಬಾಲಕನಿಗೆ ಇಷ್ಟು ಕ್ರೂರವಾಗಿ ನಡೆದುಕೊಳ್ಳಲು ಸಾಧ್ಯವಾಗಿದ್ದು ಹೇಗೆ? ಅದಕ್ಕೆ ಕಾರಣ ಆಗಿರಬಹುದಾದ ಅಂಶಗಳು ಯಾವುವು?

ಇದನ್ನೊಂದು ಬಿಡಿ ಘಟನೆಯಾಗಿ ಪರಿಗಣಿಸಿ ಪಕ್ಕಕ್ಕೆ ಸರಿಸಲು ಆಗದಂತಹ ಸ್ಥಿತಿ ಇದೆ. ಆನ್‌ಲೈನ್ ಗೇಮ್ ವ್ಯಾಪ್ತಿ ಆ ಮಟ್ಟಿಗೆ ಉಪಟಳವಾಗಿ ಪರಿಣಮಿಸಿದೆ ಮತ್ತು ಎಲ್ಲೆಡೆಗೂ ವಿಸ್ತರಿಸಿದೆ. ಲಖನೌದಲ್ಲಿ ಆದಂತಹ ಕೃತ್ಯ ಒತ್ತಟ್ಟಿಗೆ ಇಡಿ. ನಮ್ಮ ರಾಜ್ಯದ ಬೆಳಗಾವಿ ಜಿಲ್ಲೆಯಿಂದ ಕೂಡ ಇಂತಹುದೇ ಒಂದು ಕೃತ್ಯ ಮೂರು ವರ್ಷಗಳ ಹಿಂದೆ ವರದಿಯಾಗಿತ್ತು. ಆನ್‌ಲೈನ್ ಗೇಮ್ ಕಾರಣಕ್ಕೆ ಸಿಟ್ಟು ಮಾಡಿಕೊಂಡ ತಂದೆಯನ್ನು ಮಗನೇ ಜಜ್ಜಿ ಕೊಲೆ ಮಾಡಿದ್ದ. ಕಳೆದ ತಿಂಗಳು ಚಿಕ್ಕಮಗಳೂರಿನಿಂದಲೂ ಒಂದು ಕಹಿಸುದ್ದಿ ಬಂದಿತ್ತು. ಮಗಳ ಪಬ್‌ಜಿ ಗೀಳಿನ ಸಂಬಂಧ ತಂದೆ–ತಾಯಿ ನಡುವೆ ಜಗಳವಾಗಿ, ಅಂತಿಮವಾಗಿ ತಾಯಿಗೆ ಗುಂಡು ತಾಗಿ ಅವರು ದುರ್ಮರಣಕ್ಕೆ ಈಡಾಗಿದ್ದಾರೆ.

ಇವು ಕೆಲವು ನಿದರ್ಶನಗಳು ಮಾತ್ರ. ಆನ್‌ಲೈನ್ ಗೇಮ್ ಚಟದಿಂದ ಉಂಟಾಗುತ್ತಿರುವ ಬೇರೆ ಬೇರೆ ಬಗೆಯ ಅನಾಹುತಗಳಿಗೆ ಸಂಬಂಧಿಸಿದ ಸುದ್ದಿಗಳು ದೇಶದ ಎಲ್ಲೆಡೆಯಿಂದಲೂ ವರದಿಯಾಗುತ್ತಲೇ ಇವೆ. ಈ ಗೇಮ್ ಗೀಳಾಗಿ, ವ್ಯಸನವಾಗಿ ಬೆಳೆದು ಮಕ್ಕಳು ಉಗ್ರಾವತಾರ ತಾಳುತ್ತಿರುವುದು ಮತ್ತು ವಿಪರೀತಕ್ಕೆ ಹೋಗುತ್ತಿರುವುದು ಯಾವುದೇ ನಾಗರಿಕ ಸಮಾಜವನ್ನು ಕಳವಳಕ್ಕೆ ಈಡುಮಾಡುವಂತಹ ಸಂಗತಿ.

ಐದಾರು ವರ್ಷದ ಮಗುವೂ ಅಮ್ಮನ ಕೈಯಿಂದ ಮೊಬೈಲ್ ಫೋನ್ ಕಸಿದುಕೊಂಡು ಆನ್‌ಲೈನ್ ಗೇಮ್ ಆಡುವುದನ್ನು ನಮ್ಮಲ್ಲಿ ಕೆಲವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆದರೆ ಜೂಜಿನಂತೆ ಅದೂ ಒಂದು ಗೀಳಾಗಿ ಬೆಳೆದು ಕ್ರಮೇಣ ಅದರಲ್ಲೇ ಹಣ ಗಳಿಸಲು ಹೊರಟು ಸಂಕಷ್ಟದಲ್ಲಿ ಸಿಕ್ಕ ಯುವಕರ ಸಂಖ್ಯೆ ಹೆಚ್ಚುತ್ತಿದೆ ಎಂಬ ಕಹಿಸತ್ಯ ಹೆಚ್ಚು ಮಂದಿಗೆ ಗೊತ್ತಿಲ್ಲ. ಜಾಗತಿಕ ಮಟ್ಟದಲ್ಲಿ ಈ ಗೇಮ್‌ಗಳ ಗೀಳು ಅದೆಷ್ಟು ಹೆಚ್ಚುತ್ತಿದೆ ಎಂದರೆ, ಸಿನಿಮಾ ಅಥವಾ ಸಂಗೀತ ಉದ್ಯಮಕ್ಕಿಂತ ಹೆಚ್ಚಿನ ವರಮಾನವನ್ನು ಈ ಉದ್ಯಮ ಬಾಚಿಕೊಳ್ಳುತ್ತಿದೆ ಎಂಬ ವರದಿಗಳು ಇವೆ.

ನಾವೀಗ ಡಿಜಿಟಲ್ ಯುಗದಲ್ಲಿ ಇದ್ದೇವೆ. ಎಲ್ಲರ ಕೈಯಲ್ಲೂ ಒಂದು ಸ್ಮಾರ್ಟ್‌ಫೋನ್ ಇರುತ್ತದೆ. ಅದಕ್ಕೆ ಇಂಟರ್ನೆಟ್ ಸಂಪರ್ಕ ಇದ್ದೇ ಇರುತ್ತದೆ. ಆನ್‌ಲೈನ್ ಮತ್ತು ವಿಡಿಯೊ ಗೇಮ್‌ಗಳು ಈ ಕಾಲದ ಅಗತ್ಯಗಳಾಗಿವೆ, ನಿರಾಕರಿಸಲಾಗದು. ಆದರೆ ಅವುಗಳನ್ನು ಹೇಗೆ ಬಳಸಬೇಕು, ಯಾರು ಎಷ್ಟು ಬಳಸಬೇಕು ಎಂಬ ವಿವೇಚನೆ ಇರಬೇಕು. ಒಂದು ಮಿತಿಯೊಳಗೆ ಸದ್ಬಳಕೆ ಮಾಡಿಕೊಂಡರೆ ಅನುಕೂಲಗಳೂ ಇವೆ. ಕೌಶಲ ಬೆಳೆಸಿಕೊಳ್ಳಲು ಅನುವಾಗಿಸುತ್ತವೆ. ಸುರಕ್ಷಾ ವಲಯ ದಾಟಿದರೆ ಪರಿಣಾಮಗಳೂ ಅಡ್ಡಾದಿಡ್ಡಿ! ಭಾವನಾತ್ಮಕವಾಗಿ ದುಷ್ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಆರೋಗ್ಯ, ವರ್ತನೆ ಮತ್ತು ಓದಿನ ಮೇಲೆ ಕೂಡ ಪರಿಣಾಮ ಬೀರಬಹುದು.

ಈ ವಿಷಯದಲ್ಲಿ ಪೋಷಕರ ಜವಾಬ್ದಾರಿ ಹೆಚ್ಚು. ಮಕ್ಕಳ ಚಟುವಟಿಕೆಗಳ ಬಗೆಗೆ ಎಚ್ಚರ ವಹಿಸಬೇಕು. ಸರಿ–ತಪ್ಪುಗಳ ಬಗೆಗೆ ಅವರಿಗೆ ತಿಳಿಹೇಳಬೇಕು. ಅವರಿಗಾಗಿ ಸಮಯ ಹೊಂದಿಸಿಕೊಳ್ಳಬೇಕು. ಓರಗೆಯ ಮಕ್ಕಳ ಜೊತೆ ಬೆರೆಯಲು ಬಿಡಬೇಕು. ಈ ವಿಚಾರದಲ್ಲಿ ಸ್ಮಾರ್ಟ್‌ಫೋನ್ ಎಂದಿಗೂ ಪರ್ಯಾಯ ಆಗಲಾರದು. ಆಟೋಟಗಳ ಬಗೆಗೆ ಆಸಕ್ತಿ ಮೂಡಿಸಬೇಕು. ಶಾಲೆ ಮತ್ತು ಓದುವಿಕೆ ವಿಚಾರದಲ್ಲಿ ಮಕ್ಕಳ ಮೇಲೆ ಯಾವುದೇ ಕಾರಣಕ್ಕೂ ಅನಗತ್ಯ ಒತ್ತಡ ಹೇರಬಾರದು. ಇಂತಹ ಕೆಲವು ಉಪಕ್ರಮಗಳು ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕವಾಗಿ ಒದಗಿಬರಲಿವೆ.

**■ ಎನ್. ಉದಯಕುಮಾರ್**



ಈಶ್ವರ್